ಶ್ರೀ ಬಿ. ನಂಜಪ್ಪ.—ಯಾವುದಾದರೂ ಬ್ಯಾಂಕು ಡಿಫಾಲ್ಟರಾಗಿದ್ದರೆ ಸಾಲ ಕೊಡುವುದಿಲ್ಲ ವೆಂದು ಹೇಳಿದರೆ ಈಗ ದೇಶದ ಪರಿಸ್ಥಿತಿ ಉಗ್ರವಾಗಿರುವಾಗ ಜನರಿಗೆ ಅದರಿಂದ ತೊಂದರೆ ಯಾಗುವುದಿಲ್ಲವೆ?

ಶ್ರೀ ಬಿ. ಎಲ್.ಗೌಡ.—ಅದಷ್ಟು ಜನರಿಗೆ ಕೊಡಲಾಗುತ್ತಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಮೊದಲು ಎಷ್ಟು ಅರ್ಜಿಗಳು ಬಂದರೂ ಬಾವಿಗಳಿಗಾಗಿ ಸಾಲ ಮಂಜೂರು ಮಾಡಲಾಗುವುದು ಎಂದು ಹೇಳಿ, ಈಗ ಸುಮಾರು 300 ಅರ್ಜಿ ಕಳಿಸಿದರೆ 50 ಮಾತ್ರ ಮಂಜೂರುಮಾಡಿರುವುದು ಸರಿಯೇ?

ಶ್ರೀ ಬಿ. ಎಲ್. ಗೌಡ.—ಪ್ರಾರಂಭದಲ್ಲಿ ಎಲ್ಲರಿಗೂ ಸಹಾಯಮಾಡಬೇಕೆಂದಿದ್ದೆವು. ಡಿಮ್ಯಾಂಡ್ ಜಾಸ್ತಿಯಾದ ಮೇಲೆ ಹೊಸ ನಿಯಮ ಮಾಡಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—300 ಅರ್ಜಿದಾರರಿಗೆ ಮುಂದಾದರೂ ಕೊಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಪ್ರತಿಯೊಂದು ಬ್ಯಾಂಕಿಗೂ ಟಾರ್ಗೆಟ್ ಗೊತ್ತುಮಾಡಿದೆ.

ಶ್ರೀ ಎ. ಆರ್ ಪಂಚಗಾವಿ.—ಬಾವಿ ಪೂರ್ಣವಾಗಿದ್ದರೂ ಕಂಪ್ಲೀಷನ್ ಸರ್ಟಿಫಿಕೇಟ್ ಕೊಡುವಾಗ ಬಿ. ಡಿ. ಓ. ತಡಮಾಡಿದರೆ ಉಳಿದವರಿಗೆ ಶಿಕ್ಷೆಯೇಕೆ?

ಶ್ರೀ ಬಿ. ಎಲ್. ಗೌಡ.—ತಡವಾಗುತ್ತಿದೆಯೆಂದು ದೂರು ಬಂದಮೇಲೆ ಬಿ. ಡಿ. ಓ ಅಲ್ಲದೆ ಅಸಿಸ್ಟೆಂಟ್ ರಿಜಿಸ್ಟ್ರಾರರೂ ಕೂಡ ಸರ್ಟಿಫಿಕೇಟ್ ಕೊಡಬಹುದು ಎಂದು ತಿಳಿಸಿರುವುದರಿಂದ ಈಗ ಜಾಗ್ರತೆ ಕೆಲಸವಾಗುತ್ತಿದೆ.

Posting of a permanent doctor to Shirthade Hospital

37. **Sri RATNAKUMAR KATTEMAR** (Mudabidri).—

Will the Minister for Health be pleased to refer to reply given to starred question No. 208 (Sl. No. 120.) on 16th December 1967 and state:—

(*a*) whether the Government is aware that even after the lapse of 18 months Shirthady Hospital in Moodbidri firka is without a permanent doctor;

(*b*) if so, the action proposed to be taken to post a permanent doctor to that Hospital?

A.—**Sri Y. RAMAKRISHNA** (Minister for Health).—

(*a*) Yes.

(*b*) Action is being taken to post a doctor early.

ಶ್ರೀ ರತನ್‌ಕುಮಾರ್ ಕಟ್ಟೆಮಾರ್.—ಆಸ್ಪತ್ರೆ ಪ್ರಾರಂಭಿಸಿ 18 ತಿಂಗಳಾಗಿದೆ ಎಂದಿರುವುದು ಸತ್ಯಕ್ಕೆ ದೂರವಾದುದು. ಅದು 18 ವರ್ಷ ಎಂದಿರಬೇಕು. ಅಲ್ಲಿನ ಡಾಕ್ಟರು ವರ್ಗವಾಗಿ 18 ತಿಂಗಳಾಗಿದೆ. ಆದರೆ ಬೇರೊಬ್ಬರನ್ನೇಕೆ ಪೋಸ್ಟ್ ಮಾಡಿಲ್ಲ?

† ಶ್ರೀ ವೈ. ರಾಮಕೃಷ್ಣ.—ಕಳೆದ 18 ತಿಂಗಳಲ್ಲಿ ಎರಡುಸಲ ಡಾಕ್ಟರನ್ನು ಪೋಸ್ ಮಾಡಿದರೂ ಅವರು ಹೋಗಲಿಲ್ಲ. ಆದುದರಿಂದ ಮೂರನೆಯ ಸಲ ಪೋಸ್ಟ್ ಮಾಡುತ್ತಿದ್ದೇವೆ.

1-30 P.M.

ಶ್ರೀ ರತ್ನಕುಮಾರ್ ಕಚ್ಚೆಮಾರ್.—ಬರುವ ಅಸೆಂಬ್ಲಿ ಪ್ರಾರಂಭವಾಗುವುದಕ್ಕೊಳಗಾಗಿ ಮತ್ತೊಮ್ಮೆ ಪ್ರಶ್ನೆ ಕೇಳಲು ಅವಕಾಶವಿಲ್ಲದಂತೆ ಡಾಕ್ಟರನ್ನು ಪೋಸ್ಟ್ ಮಾಡುತ್ತೀರಾ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಹೌಸ್ ಸರ್ಜನ್ ಕೋರ್ಸ್ ಮುಗಿಸಿಕೊಂಡು 30 ಜನ ಡಾಕ್ಟರುಗಳು ಇಷ್ಟರಲ್ಲಿಯೇ ಬರುವವರಿದ್ದಾರೆ. ಈ ತಿಂಗಳಲ್ಲಿ ಪೋಸ್ಟ್ ಮಾಡುತ್ತೇವೆ.

ಶ್ರೀಮತಿ ಕೆ. ಲೀಲಾವತಿ ರೈ.—ಡಾಕ್ಟರುಗಳನ್ನು ಪೋಸ್ಟ್ ಮಾಡುವಾಗ ಆಯಾ ಸ್ಥಳಗಳಿಗೆ ಹೋಗಲು ಇಚ್ಛೆ ಪಡುವವರನ್ನು ಪೋಸ್ಟ್ ಮಾಡಿದರೆ ಡಾಕ್ಟರುಗಳು ಹೋಗುತ್ತಾರೆ, ಬೇಡದವರಿಗೆ ಪೋಸ್ಟ್ ಮಾಡಿದರೆ ಅವರು ಹೋಗಿ ಸೇರುವುದಿಲ್ಲ. ಆದ್ದರಿಂದ ಹಳ್ಳಿಗಳಿಗೆ ಹೋಗಲು ಸಿದ್ಧವಾಗಿರುವವರನ್ನು ಪೋಸ್ಟ್ ಮಾಡುತ್ತೀರಾ, ಸ್ವಾಮಿ ?

Sri Y. RAMAKRISHNA.—I consider it as a suggestion.

ಶ್ರೀ ಕೆ. ಎಚ್. ರಂಗನಾಥ.—ಆರೋಗ್ಯ ಮುಖ್ಯಾಧಿಕಾರಿಗಳು ತಮಗೆ ಬೇಕುಬೇಕಾದ ವರನ್ನು ಬೇಕಾದ ಕಡೆಗೆ ವರ್ಗ ಮಾಡತಕ್ಕ ಒಂದು ನೀತಿಯನ್ನು ಅನುಸರಿಸುತ್ತ ಇರುವುದರಿಂದ ರಾಜ್ಯದಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರುಗಳ ಕೊರತೆ ಉಂಟಾಗಲು ಕಾರಣವಾಗಿರುವುದು ನಿಜವೇ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಅಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರೇನಾದರೂ ಸರ್ಕಾರಕ್ಕೆ ಬರೆದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ವಿ. ಐತಾಳ.—ಶಿರ್ವಾಡಿ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲದಿದ್ದರೂ ಔಷಧಿಗಳೆಲ್ಲ ಸರ್ಕಾರದ ಲೆಕ್ಕಕ್ಕೆ ಹೋಗಿ ಗ್ರಾಮಗಳಿಂದ ಬಂದಂಥ ಜನರು ಅವರವರೇ ಔಷಧಿಗಳನ್ನು ತೆಗೆದುಕೊಂಡು ಹೋಗುತ್ತಿರುವುದು ನಿಜವೇ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ನಿಜವಲ್ಲ.

ಶ್ರೀ ಕೆ. ಎಚ್. ರಂಗನಾಥ.—ವರ್ಗಾವರ್ಗಿ ಮಾಡುವುದಕ್ಕೆ ಹಣ ಮತ್ತು ಇತರೆ ಪ್ರಭಾವ ಗಳನ್ನು ಉಪಯೋಗಿಸಿದರೆ ಮಾತ್ರ ಆಗುತ್ತದೆ ಇಲ್ಲದೆ ಹೋದರೆ ಆಗುವುದಿಲ್ಲ ಎನ್ನತಕ್ಕದ್ದು ಬೀದಿಯ ಮಾತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರದ ಗಮನಕ್ಕೆ ಬಂದಿಲ್ಲ. ಬರೆದರೆ ಸರ್ಕಾರ ಗಮನಕೆ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಪಿ. ಗಂಗಾಧರ.—ವರ್ಗಾವರ್ಗಿ ಆಗಬೇಕಾದಾಗ ಸಂಬಂಧಪಟ್ಟ ಶಾಖೆಗೆ ಯಾರು ಜಾಯಿಂಟ್ ಡೈರೆಕ್ಟರಾಗಿರುತ್ತಾರೆ ಅವರ ಸಲಹೆ ಪಡೆದು ಡೈರೆಕ್ಟರವರು ವರ್ಗ ಮಾಡಬೇಕು ಎಂದು ಇದ್ದರೂ ಕೂಡ ಈಗಿರತಕ್ಕ ಡೈರೆಕ್ಟರವರು ಜಾಯಿಂಟ್ ಡೈರೆಕ್ಟರನ್ನು ಕೇಳದೆ ತಮಗೆ ಯಾರು ಹಣವನ್ನು ಕೊಡುತ್ತಾರೆ, ಯಾರು ಒಂದು ಸಾವಿರ ರೂಪಾಯಿ ಕೊಡುತ್ತಾರೆ ಅವರಿಗೆ ಬೇಕಾದ ಜಾಗಗಳನ್ನು ಕೊಡುತ್ತಾರೆ ಎಂದು ಎಲ್ಲರೂ ಹೇಳುತ್ತಾರೆ. ಇದು ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರಕ್ಕೆ ಗೊತ್ತಿಲ್ಲ. ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಚ್. ರಂಗನಾಥ.—ವರ್ಗಾವರ್ಗಿ ಕೆಲಸವನ್ನು ಡೈರೆಕ್ಟರವರಿಂದ ತಪ್ಪಿಸಿ ಒಬ್ಬ ಐ. ಎ. ಎಸ್ ದರ್ಜೆಯ ಅಧಿಕಾರಿಗಳ ವಶಕ್ಕೆ ಅದನ್ನು ಕೊಡತಕ್ಕುದು ಸೂಕ್ತವಲ್ಲವೇ?

ಶ್ರೀ ವೈ. ರಾಮಕೃಷ್ಣ.—ಅದು ಮಾನ್ಯ ಸದಸ್ಯರ ಸಲಹೆ.

ಶ್ರೀ ಜೆ. ಟಿ. ಗೋವಿಂದರೆಡ್ಡಿ.—ಡಾಕ್ಟರನ್ನು ಪೋಸ್ಟ್ ಮಾಡುವ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೆ ಅದಕ್ಕೆ ಉತ್ತರ ಕೊಡದೆ ಇರುವುದು ನಿಜವೇ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ಕಾಗದ ಬರೆದಿದ್ದಾರೆ. ಈ ತಿಂಗಳಲ್ಲಿ ಅಲ್ಲಿಗೂ ಡಾಕ್ಟರನ್ನು ಪೋಸ್ಟ್ ಮಾಡುತ್ತೇವೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಇಬ್ಬರು ಡಾಕ್ಟರನ್ನು ಕಳಿಸಿದ್ದರೂ ಅವರು ಹೋಗಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಯಾರಾದರೂ ಪ್ರಭಾವಕ್ಕೆ ಅಥವಾ ಲಂಚದ ಪ್ರಭಾವಕ್ಕೆ

ಒಳಪಟ್ಟು ಅವರನ್ನು ಬೇರೆ ಕಡೆಗೆ ಹಾಕಲಾಯಿತೋ ಅಥವಾ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಕ್ರಮ ತೆಗೆದುಕೊಂಡಿದ್ದೇವೆ, ಅವರ ಅಪಾಯಿಂಟ್‌ಮೆಂಟ್ ಆರ್ಡರನ್ನು ಕ್ಯಾನ ಲ್ ಮಾಡಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ.—ಡೈರೆಕ್ಟರ ಹುದ್ದೆಗೆ ನೇಮಿಸಿಕೊಳ್ಳುವಾಗ ಯಾವುದಾದರೂ ಆಸ್ಪತ್ರೆಯಲ್ಲಿ ಔಷಧಿ ಕೊಟ್ಟ ಅಥವಾ ರೋಗಿಗಳನ್ನು ಚಿಕಿತ್ಸೆ ಮಾಡಿದ ಅನುಭವವಾಗಲೀ ಅಥವಾ ಯಾವುದಾದರೂ ಮೆಡಿಕಲ್ ಕಾಲೇಜಿನಲ್ಲಿ ಪಾಠ ಹೇಳಿದ ಅನುಭವವಾಗಲೀ, ಇನ್ನು ಯಾವುದೇ ಅನುಭವವಾಗಲೀ ಇಲ್ಲದೆ ಎಲ್ಲೋ ಮಲೇರಿಯಾ ವಿಭಾಗದಲ್ಲಿ ಔಷಧಿಪಾಕುವ ಕಾರ್ಯದಲ್ಲಿದ್ದವರನ್ನು ಮುಖ್ಯಾಧಿಕಾರಿಗಳ ಹುದ್ದೆಗೆ ನೇಮಿಸಿರುವುದರ ಕಾರಣವೇನು, ಸ್ವಾಮಿ ?

Sri Y. RAMAKRISHNA.—By virtue of seniority, he got the job.

Purchase of "Ram Priya" Building

38. Sri D.B. KALMANKAR (Aland).—

Will the Minister for Public Works be pleasd to state:—

(*a*) whether the 'Ram Priya' deal was abandoned by the Government as being very costly;

(*b*) on what date the Chief Engineer had given his opinion regarding the proposed purchase of the abovee building and on what date the negotiation for purchase of 'Ram Priya' building was held ?

A.— Sri K. LAKKAPPA (Minister for Public Works).—

(*a*) Yes.

(*b*) (1) 22-9-1967.
(2) 13-12-1967.

Sri D. B. KALMANKAR.—May I know the date on which the "Ram Priya" deal was abandoned, Sir?

Sri K. LAKKAPPA.—It was abandoned on 22-5-1968.

Sri D. B. KALMANKAR.—Is it a fact that on the eve of the election of the Leader of Congress Legislature party, this particular deal was abandoned as there was lot of controversy over that in order to smoothen the process of eletion, Sir ?

Sri K. LAKKAPPA.—Not so please.

ಶ್ರೀ ಎನ್. ಎ. ಜನ್ನೇಗೌಡ.—ಇದೇರೀತಿಯಲ್ಲಿ ಖಾಸಗೀ ಬಂಗಲೆಗಳನ್ನು ಕೊಂಡುಕೊಳ್ಳುವುದಕ್ಕೆ ಪತ್ರ ವ್ಯವಹಾರಗಳನ್ನು ನಡೆಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಅಂಥಾದ್ದೇನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ಸಿನ ಮುಖಂಡರ ಮುಖಾಂತರ ಬಂಗಲೆಗಳಿಗೆ ಹೆಚ್ಚು ಹಣ ಕೊಟ್ಟು ಕೊಂಡುಕೊಳ್ಳುವ ಪರಿಸ್ಥಿತಿ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—ಅಂಥಾದ್ದೇನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಾಮಪ್ರಿಯ ಡೀಲ್ ಅಪ್ರಿಯವಾಯಿತು ಎಂದು ಬಿಟ್ಟರೇ ? ಕಾರಣ ಏನು ?